ಓಂಕುಮಾರ್ ಬಿ. ಸ್ವಾಮಿ, ಬೀದರ್
*ಇಂಗ್ಲಿಷ್ ಭಾಷೆ ಮತ್ತು ಕನ್ನಡ ಭಾಷೆಗಿರುವ ವ್ಯತ್ಯಾಸವೇನು?*




ಇಂಗ್ಲಿಷ್ ಶ್ರೀಮಂತ; ಕನ್ನಡ ಧೀಮಂತ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಣ್ಣ, ಬಾತ್‌ರೂಂನಲ್ಲಿ ಜಾರಿ ಬಿದ್ದ ಗಂಡ ಅಮ್ಮಾ ಎಂದು ಅರಚುವುದರ ಉದ್ದೇಶ?*
ಎಷ್ಟೇ ಬಿದ್ದು ಬಡ್ಕೊಂಡ್ರೂ ಹೆಂಡತಿ ಕ್ಯಾರೇ ಅನ್ನಲ್ವಂತೆ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಸಾಕುನಾಯಿಗೆ ಸಿಗುವಷ್ಟು ಗೌರವ, ಆಶ್ರಯ ಹೆತ್ತವರಿಗೆ ಸಿಗುತ್ತಿಲ್ಲವೇಕೆ?*
ಕರ್ಣನನ್ನು ಹೊಗಳಿ, ಭೀಷ್ಮನನ್ನು ತೆಗಳಿದಂತಹ ದುರ್ಯೋಧನ ಬ್ರ್ಯಾಂಡ್ ಗಳು ಹೆಚ್ಚುತ್ತಿರುವುದರಿಂದ!

ಗೀತಾ ಬರ್ಲ, ಬೆಂಗಳೂರು
*ಸುಳ್ಳು ಹೇಳುವುದೂ ಒಂದು ಕಲೆಯಂತೆ; ಹೌದೆ?*
ಹೌದು; ವರ್ತಕರಿಗೆ, ವಕೀಲರಿಗೆ, ಕುಡುಕ ಗಂಡನಿಗೆ ಕರಗತವಾದ ಕಪ್ಪುಕಲೆ!

ಬಿ.ಎಸ್. ಮಳ್ಳೂರ, ಹಲಗತ್ತಿ
*ರಾಜ್ಯದಲ್ಲಿ ಭ್ರಷ್ಟರು ಹೆಚ್ಚಾಗಿದ್ದಾರೆ; ಅವರಿಗೆ ಹೇಗೆ ಬುದ್ಧಿ ಹೇಳುವಿರಿ?*



ಅವರಿಗೇಕೆ ಹೇಳಲಿ, ಅವರನ್ನು ಕಂಡಾಗ ನನ್ನ ಕಾಲಿಗೆ ಬುದ್ಧಿ ಹೇಳುತ್ತೇನೆ!

ಎಂ.ಜಿ. ಶಿವರಾಂ, ಬೆಂಗಳೂರು
*ಕನ್ನಡ ಸಾಹಿತ್ಯಕ್ಕೆ ನೊಬೆಲ್ ಪಾರಿತೋಷಕ ತಂದುಕೊಡುವ ಶಕ್ತಿ ಯಾವ ಕೃತಿಗೆ ಇದೆ?*
ಮಂಕುತಿಮ್ಮನ ಕಗ್ಗ! ಆದರೆ ಮಂಕನಿಗೂ ತಿಳಿಯುವ ಈ ಸತ್ಯ ಮುಖ್ಯರಿಗೆ ತಿಳಿದಿಲ್ಲ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮನುಷ್ಯರಿಗೆ ದೇವರು ಬಾಲ ಕೊಟ್ಟಿದ್ದರೆ?*
ಈಗಲೂ ಇದೆಯಲ್ಲಾ! ಅಮ್ಮನಿಗೆ ಮಕ್ಕಳೇ ಬಾಲ, ಮಂತ್ರಿಗೆ ಚೇಲಾ ಬಾಲ...

ಬಸವಣ್ಣ ಹೊನಖಾಂಡೆ, ಬಸವನ ಬಾಗೇವಾಡಿ
*ಹೆಂಡ + ಹೆಂಡತಿ = ?*
ಕಿಕ್!

ಮುರಲೀಧರ ಕುಲಕರ್ಣಿ, ಬೀದರ್
*ನಗುವ ಗೌಡರನ್ನು ನಗೆಹಬ್ಬಕ್ಕೂ, ನಗದ ಗೌಡರನ್ನು ಶ್ರದ್ಧಾಂಜಲಿ ಸಭೆಗೂ ಅಧ್ಯಕ್ಷರನ್ನಾಗಿಸಿದರೆ ಹೇಗಿರುತ್ತದೆ?*
ಹುಷಾರು! ಅದಲುಬದಲಾಗಿ ಶವದ ಮುಂದೆ ನಕ್ಕು ಎಡವಟ್ಟಾದೀತು!

ಎಚ್.ಆರ್. ದೇಸಾಯಿ, ರಾಯಚೂರು
*ಭಾರತದ ಪ್ರತಿಯೊಬ್ಬ ಪ್ರಜೆಯೂ ಭಾರತರತ್ನ ಬಿರುದು ಪಡೆಯಲು ಮಾಡಬೇಕಾದ ಕೆಲಸಗಳೇನು?*
ಪ್ರತಿಯೊಬ್ಬನಿಗೂ ಬಿರುದೇ? ಹಾಗಿದ್ದರೆ ರೇಷನ್ ಡಿಪೋದಲ್ಲಿ ಹಂಚುವಂತೆ ವ್ಯವಸ್ಥೆ ಮಾಡಿಸಿ, ಕ್ಯೂ ನಿಂತು ಪಡೆಯಬೇಕು!

ಆರ್. ಕೃಷ್ಣಮೂರ್ತಿ, ಕೆ.ಆರ್. ಪೇಟೆ
*ಸತಿ ಇಲ್ಲದ ಪತಿ ಯಾಗಕ್ಕೆ ಅರ್ಹನೆ?*
ಪ್ರಯಾಗಕ್ಕೆ ಅರ್ಹ!

ತೋ.ರಾ. ರವೀಂದ್ರ, ಬೆಂಗಳೂರು
*ಹೆಣ್ಣಿಗೆ ಆರು ಗುಣಗಳು ಇರಬೇಕು, ಆದರೆ ಅವಳನ್ನು ವರಿಸುವ ಗಂಡಿಗೆ ಎಷ್ಟು ಗುಣಗಳಿರಬೇಕು?*
ಅವಳ ಮಾತಿಗೆ ಹೂಂ ಎನ್ನುವ ಒಂದೇ ಗುಣವಿದ್ದರೆ ಸಾಕು!

ಎ.ಎಸ್. ಸ್ವಾಮಿ, ಶೋರಾಪುರ
*ಹಗಲುಗನಸಿನಿಂದ ಏನಾದರೂ ಪ್ರಯೋಜನ ಉಂಟೆ?*
ಕವನಗಳು, ಸೀರಿಯಲ್‌ಗಳು, ಸಿನಿಮಾಗಳ ಉದಯ!

ಪಿ.ಎಸ್. ಶ್ರೀವತ್ಸ, ಬೆಂಗಳೂರು
*ಮನುಷ್ಯ ಒಂದು ಬಾರಿ ಕಳೆದುಕೊಳ್ಳುವುದು ಶುರುವಾದರೆ ನಿರಂತರವಾಗಿ ಕಳೆದುಕೊಳ್ಳುತ್ತಲೇ ಇರಲು ಕಾರಣ?*
ಜೀವನ ಜಾರುಬಂಡೆಯಂತೆ; ಒಂದೊಂದೇ ಮೆಟ್ಟಲಾಗಿ ಏರುತ್ತೇವೆ, ಜರ್ರನೆ ತಳಕ್ಕೆ ಜಾರುತ್ತೇವೆ!

## ಬಹುಮಾನಿತ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಎರಡನೇ ಮದುವೆ ಆಗುವವನ ಸಾಹಸ ಹೆಬ್ಬಾವಿನೊಡನೆ ಸರಸವಾಡಿದಂತೇನಾ ಸಾರ್?
ನಿಜವೇ; ನಾ ಗಿಣಿ ಎಂದು ಬರುವವಳು ನಾಗಿಣಿ ಆಗುವ ಸಂದರ್ಭಗಳೇ ಹೆಚ್ಚು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಮಳೆ ನಿಂತರೂ ಹನಿ ನಿಲ್ಲದು ಎನ್ನುತ್ತಾರಲ್ಲಾ, ಹಾಗೇಕೆ ರಾಮ್?*
ಸೋರುತಿಹುದು ಮನೆಯ ಮಾಳಿಗಿ, ನೀರ್‍ನಿಂತಿದ್ರಿಂದ....!

ಡಿ.ಎಲ್. ಚಂದ್ರಿಕಾ, ಚನ್ನಗಿರಿ
*ಶ್ರೀಮಂತನ ದುಷ್ಟತನವನ್ನು ತಿಳಿದೂ ಬಡವ ಆತನನ್ನೇ ಅವಲಂಬಿಸುತ್ತಾನೆ, ಏಕೆ?*
ಇಲ್ಲವಾದರೆ ಇವನಿಗೆ ಕಾಟ ಕೊಡುವುದನ್ನು ಅವ ಲಂಬಿಸುತ್ತಾನೆ!

ಸವಿರವಿ, ಬಾಳೆಹೊನ್ನೂರು
*ಸತ್ತವರೆಲ್ಲಾ ಯಾಕೆ ಕಾಗೇನೇ ಆಗ್ತಾರೆ?*



ಬದುಕಿದ್ದಾಗ ಅಂಕಲ್, ಆಂಟಿ ಆಗಿರುತ್ತಾರಲ್ಲಾ, ಸತ್ತನಂತರ ಕಾಕಾ, ಕಾಕಿ ಆಗಿರಲು!

ವಿಶಾಲಾಕ್ಷಿ, ಬೆಂಗಳೂರು
*ಓ ಗಂಡಸರೇ, ನೀವೆಷ್ಟು ನೀಚರು, ನಿಕೃಷ್ಟರು, ಅಧಮರು, ಕ್ರೂರಿಗಳು ಮತ್ತು ಕೆಟ್ಟವರು? ಎಂಬ ಹೆಸರಿನ ಸಿನೆಮಾ ನಿರ್ಮಿಸಬೇಕೆಂದಿದ್ದೇನೆ. ನಿಮ್ಮ ಸಲಹೆ?*
ಪುಢಾರಿಗಳು ಮತ್ತು ಕ್ರಿಮಿನಲ್–ಲಾಯರ್ ಗಳು ಎಂಬ ಹೆಸರಿಡಿ ಸಾಕು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಕಷ್ಟಕಾಲದಲ್ಲಿ ನೆನಪಾಗುವ ದೇವರು ಸುಖ ಬಂದಾಗ ನೆನಪಾಗುವುದಿಲ್ಲವೇಕೆ?*
ಪರವಾಗಿಲ್ಲ ಬಿಡಿ; ಹಾಗಾದರೂ ದೇವನಿಗೆ ಒಂದಿಷ್ಟು ರೆಸ್ಟ್ ಸಿಗಲಿ!

ರಾಮ್